ಅದನ್ನು ಸ್ವಾಮಿ ವಿಜ್ಞಾನಾನಂದಜಿ ಅವರ ಮೇಲ್ವಿಚಾರಣೆಯಲ್ಲಿ ನವೀಕರಿಸಲಾಯಿತು. ಇದಕ್ಕೆ ತಗಲಿದ ಖರ್ಚನ್ನು ಸ್ವಾಮಿ ವಿವೇಕಾನಂದರ ಅನುಯಾಯಿಯಾದ ಶ್ರೀಮತಿ ಒಲೆ ಬುಲ್ ಅವರು ಭರಿಸಿದರು. ಈ ಯೋಜನೆ ಸಂಪೂರ್ಣಗೊಳ್ಳಲು ಒಂದು ವರ್ಷ ಹಿಡಿಯಿತು.


ಮಠದ ಪ್ರಾಂಗಣ ಮತ್ತು ಮಹಡಿಯ ಮೇಲೆ ಹಳೆಯ ದೇವಸ್ಥಾನವಿರುವ ಕಟ್ಟಡ

೧೮೯೮ ನೇ ಇಸವಿ, ನವೆಂಬರ್ ೧೨ ರಂದು ಶ್ರೀಮಾತೆ ಶಾರದಾದೇವಿಯವರು ಬೇಲೂರು ಮಠಕ್ಕೆ ಭೇಟಿಕೊಟ್ಟಿದ್ದರು. ಆ ಸಮಯದಲ್ಲಿ ನವೀಕರಣ ಕಾರ್ಯವು ಇನ್ನೂ ನಡೆಯುತ್ತ ಇತ್ತು. ಅವರು, ತಾವು ದಿನನಿತ್ಯ ಪೂಜಿಸುತ್ತಿದ್ದ ಶ್ರೀರಾಮಕೃಷ್ಣರ ಚಿತ್ರವನ್ನು ತಮ್ಮೊಂದಿಗೆ ತಂದಿದ್ದರು. ಹಳೆಯ ಕಟ್ಟಡದ ಒಂದು ಭಾಗವನ್ನು ಶುಚಿಗೊಳಿಸಲಾಗಿತ್ತು. ಅಲ್ಲಿ ಅದನ್ನು ಇಟ್ಟು ಶ್ರೀಮಾತೆಯವರು ಪೂಜಿಸಿದರು.

ನಾವೀಗ ಮಠದ ಪ್ರಾಂಗಣವನ್ನು ಪ್ರವೇಶಿಸೋಣ. ನಮ್ಮ ಮುಂದುಗಡೆ ಇರುವ ಕಟ್ಟಡ ಸಂಕೀರ್ಣ (ಚಿತ್ರ ನೋಡಿ) ಮತ್ತು ಬಲಕ್ಕಿರುವ ಕಟ್ಟಡ – ಇದಿಷ್ಟೇ ಸ್ವಾಮಿ ವಿವೇಕಾನಂದರ ಕಾಲದಲ್ಲಿ ಇದ್ದ ಬೇಲೂರು ಮಠ. ನಮ್ಮ ಎಡಗಡೆ ಇರುವ ಕಟ್ಟಡ ಸಂಕೀರ್ಣ, ಇದನ್ನು ಈಗ 'ಮಠದ ಕಛೇರಿ' ಎಂದು ಕರೆಯುತ್ತಾರೆ, ಆಮೇಲೆ ಸೇರಿಸಿದ್ದು.

ಈ ಪ್ರಾಂಗಣವು ಒಂದು ಪವಿತ್ರ ತಾಣ. ಶ್ರೀರಾಮಕೃಷ್ಣರು ಇಲ್ಲಿ ಅಡ್ಡಾಡುತ್ತಿದ್ದಂತೆ ಸ್ವಾಮಿ ಶಿವಾನಂದರು ದರ್ಶನವೊಂದನ್ನು ಕಂಡರು. ಈ ಅನುಭವದ ನಂತರ, ಈ ಸ್ಥಳವು ಶುಚಿಯಾಗಿ ಇರುವುದನ್ನು ಮತ್ತು ಇದರ ನಿರ್ವಹಣೆ ಚೆನ್ನಾಗಿ ಆಗುತ್ತಿರುವುದನ್ನು ಅವರು ಖಾತರಿ ಮಾಡಿಕೊಳ್ಳುತ್ತಿದ್ದರು. ಈ ಸ್ಥಳವನ್ನು ಶುದ್ಧ ಮಾಡುತ್ತಿದ್ದ ಒಬ್ಬ ಬ್ರಹ್ಮಚಾರಿಗೆ ಅವರು ಹೀಗೆ ಹೇಳಿದರು: "ಮಗು, ನೀನು ಇದನ್ನು ಸರಿಯಾಗಿ ಮಾಡುತ್ತಿಲ್ಲ. ಅಲ್ಲಿ ಇನ್ನೂ ಸ್ವಲ್ಪ ಕಸ ಉಳಿದಿದೆ. ಸುಟ್ಟುಹೋದ ಬೆಂಕಿಕಡ್ಡಿಯ ತುಂಡುಗಳು ಅಲ್ಲಿ ಹರಡಿವೆ. ಶ್ರೀರಾಮಕೃಷ್ಣರು ಇಲ್ಲಿ ನಡೆದಾಡುತ್ತಾರೆ. ಈ ಸ್ಥಳವನ್ನು ಜಾಗರೂಕತೆಯಿಂದ ಶುಚಿಗೊಳಿಸು. ಅವರು ನಡೆದಾಡುವಾಗ ಅವರ ಕಾಲಿಗೆ ಯಾವುದೂ ತಗಲಬಾರದು. ನಡೆಯುವಾಗ ಅವರಿಗೆ ಯಾವ ನೋವೂ ಆಗಬಾರದು."

ಈ ಪ್ರಾಂಗಣವು ಶ್ರೀಮಾತೆಯವರ ಸಾನ್ನಿಧ್ಯದಿಂದಲೂ ಪುನೀತವಾಗಿದೆ. ಅವರು ೧೯೧೬ ರ ದುರ್ಗಾಪೂಜೆಯ ಸಮಯದಲ್ಲಿ ಬೇಲೂರು ಮಠಕ್ಕೆ ದಯಮಾಡಿಸಿದ್ದರು. ಆಗ ಸಾಧುಗಳು ಮತ್ತು ಭಕ್ತರು, ಹಳೆಯ ದೇವಮಂದಿರದ ಕೆಳಗಿನ ಅಂಗಣದಲ್ಲಿ ತರಕಾರಿಯನ್ನು ಹೆಚ್ಚುವ ಕೆಲಸದಲ್ಲಿ ತನ್ಮಯರಾಗಿದ್ದರು. ಈಗ ಅದು ಮಠದ ಕಛೇರಿಯ ಒಂದು ಭಾಗವಾಗಿದೆ. ಆ ದಿನಗಳಲ್ಲಿ ಆ ಸ್ಥಳವನ್ನು, ಸಾಮಾನ್ಯ ಉಗ್ರಾಣವಾಗಿಯೂ, ಅಡುಗೆ ಮನೆ ಮತ್ತು ಊಟದ ಮನೆಯಾಗಿಯೂ ಉಪಯೋಗಿಸುತ್ತಿದ್ದರು. ಭಕ್ತರು ಮತ್ತು ಸಾಧುಗಳು ತರಕಾರಿ ಹೆಚ್ಚುತ್ತಿದ್ದುದನ್ನು ಕಂಡು, ಆ ಕಟ್ಟಡದ ಮುಂದೆ ನಡೆದಾಡುತ್ತಿದ್ದ ಶ್ರೀಮಾತೆ ಹೀಗೆ ಉದ್ಗರಿಸಿದರು: "ನನ್ನ ಮಕ್ಕಳು ಅದೆಷ್ಟು ಚೆನ್ನಾಗಿ ತರಕಾರಿ ಹೆಚ್ಚುತ್ತಿದ್ದಾರೆ!" ಅದಕ್ಕೆ ರಮಣಿ ಎಂಬ ಬ್ರಹ್ಮ ಚಾರಿ (ಮುಂದೆ ಸ್ವಾಮಿ ಜಗದಾನಂದಜಿ) ಉತ್ತರ ಕೊಟ್ಟನು: "ನಮ್ಮ ಉದ್ದೇಶ ಜಗನ್ಮಾತೆಯ ಕೃಪೆಯನ್ನು ಹೊಂದುವುದು – ಅದು ಧ್ಯಾನದ ಮೂಲಕವಾಗಲಿ, ಇಲ್ಲವೇ ತರಕಾರಿ ಹೆಚ್ಚುವ ಮೂಲಕವಾಗಲಿ."

ಈ ಪ್ರಾಂಗಣವು ಸ್ವಾಮಿ ವಿವೇಕಾನಂದರ ಸ್ಮರಣೆಗಳೊಂದಿಗೆ ಎಂದೆಂದಿಗೂ ಅವಿನಾಭಾವ ಸಂಬಂಧ ಹೊಂದಿದೆ. ೧೯೦೨, ಜುಲೈ ೪ ರಂದು, ಅಂದರೆ ಅವರ ಭೌತಿಕ ಜೀವನದ ಕಟ್ಟಕಡೆಯ ದಿನದಂದು, ಪ್ರಾತಃಕಾಲ ಶ್ರೀರಾಮಕೃಷ್ಣರ ಶಯನಗೃಹದಲ್ಲಿ ಸುಮಾರು ಮೂರು ಗಂಟೆಗಳ ಕಾಲ ಅವರು ಧ್ಯಾನ ಮಾಡಿದರು. ಅನಂತರ ಪೂಜಾಮಂದಿರದ ಮೆಟ್ಟಿಲುಗಳಿಂದ ಇಳಿದುಬಂದು, ಮಠದ ಈ ಪ್ರಾಂಗಣದಲ್ಲಿ ಅತ್ತಿಂದಿತ್ತ ಅಡ್ಡಾಡಿದರು. ಆಗ ಅವರ ಮನಸ್ಸು ಅಂತರ್ಗತವಾಗಿತ್ತು. ಹಠಾತ್ತನೆ, ಅವರ ಹತ್ತಿರವಿದ್ದ ಸ್ವಾಮಿ ಪ್ರೇಮಾನಂದರಿಗೆ (ಶ್ರೀರಾಮಕೃಷ್ಣರ ಪ್ರತ್ಯಕ್ಷಶಿಷ್ಯರಲ್ಲಿ ಒಬ್ಬರು) ಕೇಳಿಸುವಷ್ಟು ಗಟ್ಟಿಯಾಗಿ ತಮಗೆ ತಾವೇ ಹೀಗೆ ಹೇಳಿಕೊಂಡರು: **"ಇನ್ನೊಬ್ಬ ವಿವೇಕಾನಂದನೇನಾದರೂ ಇದ್ದಿದ್ದರೆ, ಈ ವಿವೇಕಾನಂದ ಏನು ಸಾಧಿಸಿದನೆಂಬುದನ್ನು ತಿಳಿದಿರುತ್ತಿದ್ದ! ಹೀಗಾದರೂ, ಕಾಲಾಂತರದಲ್ಲಿ ಅದೆಷ್ಟು ವಿವೇಕಾನಂದರು ಹುಟ್ಟಿಬರುವರೋ!"**

## ಸ್ವಾಮೀಜಿಯ ಮಾವಿನ ಮರ

ಮಠದ ಪ್ರಾಂಗಣದ ಪೂರ್ವದಿಕ್ಕಿನಲ್ಲಿ ಒಂದು ಮಾವಿನ ಮರ ಬೆಳೆದುನಿಂತಿದೆ. ಅದು ಈ ಭೂಮಿಯನ್ನು ಕೊಂಡುಕೊಂಡಾಗಿನಿಂದ ಇದ್ದ ಮರಗಳಲ್ಲಿ ಒಂದು. ಸ್ವಾಮಿ ವಿವೇಕಾನಂದರ ಜೀವನಚರಿತ್ರೆಯಲ್ಲಿ ಇದರ ಬಗ್ಗೆ ಹೀಗೆ ಬರೆದಿದೆ: "ಸ್ವಾಮೀಜಿಯ ಇನ್ನೊಂದು ಮೆಚ್ಚಿನ ಕುಳಿತುಕೊಳ್ಳುವ ಸ್ಥಳವೆಂದರೆ, ಒಂದು ದೊಡ್ಡ ಮಾವಿನ ಮರದ ಕೆಳಗೆ. ಅದು ಶ್ರೀರಾಮಕೃಷ್ಣರ ಪೂಜಾಮಂದಿರ ಮತ್ತು ಮಠದ ಕಟ್ಟಡದ ಮಧ್ಯೆ ಇದೆ. ಇಲ್ಲಿ ಬೆಳಗಿನ ಜಾವದಲ್ಲಿ ಸ್ವಾಮೀಜಿ ಕುಳಿತಿರುವುದನ್ನು ನೋಡಬಹುದಾಗಿತ್ತು. ಅಲ್ಲಿ ಅವರು ಒಂದು ಕ್ಯಾನ್‌ವಾಸ್ ಮಂಚದ ಮೇಲೆ, ತಮ್ಮ ಪತ್ರವ್ಯವಹಾರವನ್ನು ಗಮನಿಸುತ್ತಲೋ, ಲೇಖನಗಳನ್ನು ಬರೆಯುತ್ತಲೋ, ಓದುತ್ತಲೋ ಅಥವಾ ಮಾತುಕತೆಯಾಡುತ್ತಲೋ ಕುಳಿತಿರುತ್ತಿದ್ದರು."